ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದರೆ ಇದನ್ನು ಸರಿಪಡಿಸಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳುವುದು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ವಾರ್ಷಿಕ ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ರೂ.50,000 ಮೌಲ್ಯದ ಔಷಧಿ ಸರಬರಾಜು ಮಾಡಲಾಗುವುದು. 20,000 ರೂ. ಮೌಲ್ಯದ ಔಷಧಿಗಳನ್ನು ಸರ್ಕಾರ ಔಷಧಿ ಮಳಿಗೆಯಿಂದ ಹಾಗೂ 30,000 ರೂ. ಮೌಲ್ಯದ ಔಷಧಿಗಳನ್ನು ಜಿಲ್ಲಾ ಪಂಚಾಯತಿ ವತಿಯಿಂದ ಸರಬರಾಜು ಮಾಡಲಾಗುವುದು.

ಆ) ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ವಿಷಯ: ಖಾಲಿ ಇರತಕ್ಕ ದೈಹಿಕ ಶಿಕ್ಷಕರ ಹುದ್ದೆಗಳ ಭರ್ತಿ.

2492 (3599)

ಶ್ರೀ ಎ.ರುಕ್ಮಯ್ಯ ಪೂಜಾರಿ (ಪುತ್ತೂರು): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಲಿ ಇರುವ ದೈಹಿಕ ಶಿಕ್ಷಕರ ಹುದ್ದೆಗಳೆಷ್ಟು?

ಆ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಜಿ.ಗೋವಿಂದಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 110 ಹಾಗೂ ಸರ್ಕಾರಿ ಪ್ರೌಢಶಾಲೆಗಳಲ್ಲಿ 83 ಹುದ್ದೆಗಳು ಖಾಲಿ ಇದೆ.

ಆ) ಮುಂದಿನ ನೇಮಕಾತಿಯಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡಲು ಅಗತ್ಯ ಕ್ರಮ ತೆಗೆಮಕೊಳ್ಳಲಾಗುವುದು.

ವಿಷಯ: ರಾಜ್ಯದಲ್ಲಿರುವ ಯುನಾನಿ ಕಾಲೇಜುಗಳು.

2493 (3164)

ಶ್ರೀ ಎನ್.ರಾಜಣ್ಣ, (ಭಾರತಿನಗರ): ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಯುನಾನಿ ಕಾಲೇಜುಗಳೆಷ್ಟು? (ಖಾಸಗಿ ಮತ್ತು ಸರ್ಕಾರ ಎರಡೂ ಸೇರಿ).

ಆ) ಅವುಗಳು ಯಾವ ಸ್ಥಳದಲ್ಲಿವೆ?

ಇ) ಖಾಸಗಿ ಆಡಳಿತ ಮಂಡಳಿಯವರಿಗೆ ರಾಜ್ಯದಲ್ಲಿ ಯುನಾನಿ ಕಾಲೇಜು ತೆಗೆಯಲು ಸ್ವೀಕೃತಗೊಂಡಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಈ) ಈ ಸಂಬಂಧದಲ್ಲಿ ತೆಗೆದುಕೊಂಡ ಕ್ರಮಗಳೇನು?

ಡಾ॥ ಎಂ.ಶಂಕರ್‌ನಾಯ್ಕ್ (ವೈದ್ಯಕೀಯ ಶಿಕ್ಷಣ ಸಚಿವರು):

ಅ) ಕರ್ನಾಟಕ ರಾಜ್ಯದಲ್ಲಿ 2 ಯುನಾನಿ ಕಾಲೇಜು ಗಳು ಕಾರ್ಯ ನಿರ್ವಹಿಸುತ್ತಿವೆ. ಒಂದು ಸರ್ಕಾರಿ ಒಂದು ಖಾಸಗಿ.

ಆ) 1) ಸರ್ಕಾರಿ ಯುನಾನಿ ಕಾಲೇಜು, ಬೆಂಗಳೂರು.

2) ಬಿ.ಎಲ್.ಕರಡಿ ಯುನಾನಿ ಕಾಲೇಜು, ಬಿಜಾಪುರ.

ಇ) ಖಾಸಗಿ ಆಡಳಿತ ಮಂಡಳಿಯವರಿಂದ ರಾಜ್ಯದಲ್ಲಿ ಯುನಾನಿ ಕಾಲೇಜುಗಳನ್ನು ತೆಗೆಯಲು 2 ಅರ್ಜಿಗಳು ಸ್ವೀಕೃತಗೊಂಡಿವೆ. ಒಂದು ಗುಲ್ಬರ್ಗಾದಲ್ಲಿ ಇನ್ನೊಂದು ತುಮಕೂರಿನಲ್ಲಿ.

ಈ) ಈ ಕಾಲೇಜುಗಳಿಗೆ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಸಂಯೋಜನೆ ಶಿಫಾರಸ್ಸು ನೀಡಿದೆ. ವಿಶ್ವವಿದ್ಯಾಲಯದ ವರದಿ ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ: ರಾಜೀವ್ ಗಾಂಧಿ ವೈದ್ಯಕೀಯ ವಿಶ್ವವಿದ್ಯಾನಿಲಯದಲ್ಲಿನ ಹುದ್ದೆಗಳ ಕುರಿತು

2495 (3611)

ಶ್ರೀ ಎ.ರಾಮದಾಸ್ (ಕೃಷ್ಣರಾಜ): ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜೀವ್‌ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಎಷ್ಟು ಜನರನ್ನು ತಾತ್ಕಾಲಿಕ ಸೇವೆ ಆಧಾರದಲ್ಲಿ ನೇಮಿಸಲಾಗಿದೆ? ಅವರುಗಳು ಯಾರು ಯಾರು? ಯಾವ ಯಾವ